# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 34, ಗಂಗೇನಹಳ್ಳಿ, ಬೆಂಗಳೂರು.**

**ಸಂಖ್ಯೆ: ಸ.ಅ/ವಾ-34/ಪಿ.ಆರ್/ 20/2021-22** **ದಿನಾಂಕ:-11-10-2021**

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 04-10-2021 ರಂದು ವಾರ್ಡ್ ನಂ:34 ಗಂಗೇನಹಳ್ಳಿ, ವಾರ್ಡ್ 20 ಗಂಗಾನಗರ ವಾರ್ಡ್ ಕಛೇರಿ ಇಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**::ಸಭೆಗೆ ಹಾಜರಾಗಿದ್ದವರ ವಿವರಗಳು::**

| ಕ್ರಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ. ತಿಮ್ಮರಸ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ. ರಾಮ್‌ರಾವ್ | ವಾರ್ಡ್ ಸದಸ್ಯ ಕಾರ್ಯದರ್ಶಿಗಳು ಹಾಗೂ ಕಿರಿಯ ಅಭಿಯಂತರರು |
| 3. | ಶ್ರೀ ಭೂಮೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4. | ಸುವರ್ಣದೇವಿ.ವೈ.ಬಿ | ಬಿ.ಡಬ್ಲ್ಯೂ.ಎಸ್.ಎಸ್.ಬಿ |

ವಾರ್ಡ್ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ರಾಮರಾವ್ (ಕಿರಿಯ ಅಭಿಯಂತರರು) ರವರು ಸಭೆಗೆ ಹಾಜರಾದ, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ. ತಿಮ್ಮರಸ ರವರಿಗೆ ಮತ್ತು ಸಭೆಯಲ್ಲಿ ಹಾಜರಾಗಿದ್ದ ಸಾರ್ವಜನಿಕರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ. 34 ರವರು ಸ್ವಯಂ ಪರಿಚಯ ಮಾಡಿಕೊಂಡು ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ, ರಸ್ತೆಗುಂಡಿ ಮುಚ್ಚುವ ಬಗ್ಗೆ ಬೀದಿ ದೀಪಗಳ ನಿರ್ವಹಣೆಯ ಬಗ್ಗೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಸಾರ್ವಜನಿಕರಿಗೆ ತಿಳಿಯಪಡಿಸಿದರು.

1. ಸಿ.ಪಿ.ವಿ ಬ್ಲಾಕ್, 5ನೇ ಮುಖ್ಯರಸ್ತೆಯಲ್ಲಿ ಭಾರತಿ ಏರ್‌ಟೆಲ್ ಸಂಸ್ಥೆಯವರು ಅಗೆದಿರುವ ಗುಂಡಿಯನ್ನು ಸರಿಯಾಗಿ ಮುಚ್ಚಿಸುವ ವಿಷಯದ ಕುರಿತು ಚರ್ಚಿಸಲಾಯಿತು.
2. ಕೆ.ಹೆಚ್.ಎಂ ಬ್ಲಾಕ್ ಮಸೀದಿ ಹಿಂಭಾಗ ಬೋರ್‌ವೆಲ್ ರಿಪೇರಿ ಮಾಡಿಸುವ ಕುರಿತು ಚರ್ಚಿಸಲಾಯಿತು.
3. ಗಂಗಾನಗರ ಬಡಾವಣೆ, 3ನೇ ಮುಖ್ಯರಸ್ತೆ, 4ನೇ ಕ್ರಾಸ್‌ನಲ್ಲಿನ ಬೋರ್‌ವೆಲ್ ಸರಿಪಡಿಸುವುದರ ಕುರಿತು ಚರ್ಚಿಸಲಾಯಿತು.
4. ಸಿ.ಪಿ.ವಿ ಬ್ಲಾಕ್ 4ನೇ ಮುಖ್ಯರಸ್ತೆಯಲ್ಲಿ ಗಣೇಶ ದೇವಸ್ಥಾನದ ಪಕ್ಕದಲ್ಲಿ ಭಾರತಿ ಏರ್‌ಟೆಲ್ ಸಂಸ್ಥೆಯವರು ಅಗೆದಿರುವ ಗುಂಡಿಯನ್ನು ಸರಿಯಾಗಿ ಮುಚ್ಚಿಸುವ ವಿಷಯದ ಕುರಿತು ಚರ್ಚಿಸಲಾಯಿತು
5. 1ನೇ ಮುಖ್ಯರಸ್ತೆ ಗಂಗಾನಗರ ಬಡಾವನೆಯಲ್ಲಿನ ದೇವಸ್ಥಾನದ ಮುಂಭಾಗ ತ್ಯಾಜ್ಯವನ್ನು ಸ್ವಚ್ಚಗೊಳಿಸುವಂತೆ ಸೂಚಿಸಲಾಯಿತು